

## ಕೈಗೆ ಸಿಗದ ‘ಕೈ ಗಾಣ’

ಒಂದು ಸಮಯದಲ್ಲಿ, ಅದರಲ್ಲೂ ವಿಶೇಷವಾಗಿ ಕಬ್ಬು ಬೆಳೆಯುವ ಮಲೆನಾಡು ಪ್ರದೇಶದಲ್ಲಿ ಕಟ್ಟಿಗೆಯ ಕೈ ಗಾಣ ಅನ್ನದಾತನ ಮನೆಯಲ್ಲಿ ಸಾಮಾನ್ಯ ಎಂಬಂತೆ ಇರುವುದನ್ನು ಕಾಣಬಹುದಿತ್ತು. ಜಿಡುಕ ಗುಣದ ಮರದಿಂದ ತಯಾರಿಸಿದ ಈ ಕೈ ಗಾಣಕ್ಕೆ ಮೂರು ಕಣೆಗಳಿವೆ. ಈ ಕೈ ಗಾಣವನ್ನು ನಾಲ್ಕು ಕಾಲುಗಳುಳ್ಳ ಪೀಠದ ಮೇಲೆ ಭದ್ರಪಡಿಸಿ, ಮಧ್ಯದ ಕಣೆಗೆ ಹೊಂದಿಕೊಂಡು ಕೈಯಿಂದ ತಿರುಗಿಸುವಂತೆ ಅಡ್ಡಲಾಗಿ ಕೋಲಿಡಲಾಗಿದೆ. ಅದನ್ನು ತಿರುಗಿಸಿದಾಗ ಮೂರು ಕಣೆಗಳು ತಿರುಗುವ ನೈಪುಣ್ಯತೆಯ ಕೆಲಸ ಮಾಡುತ್ತವೆ. ಕಬ್ಬಿನ ಕಟಾವಿನ ನಂತರವೂ ಹಲವು ಹಿಂಡಿಗೆ ಕಬ್ಬನ್ನು ಮನೆಯ ಉಪಯೋಗಕ್ಕೆ ವರ್ಷವಿಡೀ ಇಟ್ಟು ಈ ಕೈ ಗಾಣದ ಮೂಲಕವೇ ಕಬ್ಬಿನ ಹಾಲನ್ನು ತೆಗೆಯಲಾಗುತ್ತಿತ್ತು.

ಕೈ ಗಾಣವನ್ನು ತಿರುಗಿಸುವವರು ಶಕ್ತಿವಂತರಾಗಿದ್ದರೆ, ಎರಡು ಕಡೆ ಕಬ್ಬನ್ನು ಗಾಣಕ್ಕೆ ಹಾಕಿ ಕಬ್ಬಿನ ಹಾಲನ್ನು ತೆಗೆಯುವ ಪದ್ಧತಿ ಕೂಡ ಇತ್ತು. ಈ ಗಾಣವನ್ನು ಶಕ್ತಿವಂತ ಪುರುಷರಿಬ್ಬರು ಬೇಕಾದ ಕಡೆ ಒಯ್ಯಬಹುದಾಗಿತ್ತು. ಕಬ್ಬಿಣದ ವಿದ್ಯುತ್ ಮಿನಿ ಗಾಣ ಬಂದ ನಂತರದ ದಿನಗಳಲ್ಲಿ ಕಟ್ಟಿಗೆಯ ಕೈ ಗಾಣ ಯಾರ ಕೈಗೂ ಸಿಗದೇ ನೇಪಥ್ಯಕ್ಕೆ ಸೇರಿರುವುದು ಆಧುನಿಕತೆಯ ವಿಪರ್ಯಾಸ.

–ನವ್ಯ ಶಿವದೇವ ಮೊಗಟಾ, ನವದೆಹಲಿ



## ಮರದ ಬುಡದಲ್ಲಿ ವಿನಾಯಕ

ಭಿನ್ನವಾಗಿ ರೂಪುಗೊಳ್ಳುವುದೇ ಪ್ರಕೃತಿಯ ವೈಚಿತ್ರ್ಯ. ಇದಕ್ಕೆ ಸಾಕ್ಷಿ ರಸ್ತೆ ಬದಿಯೊಂದರ ಕಣಗಿಲ ಮರದ ಬುಡದಲ್ಲಿ ಗಣಪತಿಯ ಆಕಾರ ಮೂಡಿ, ಅಚ್ಚರಿಗೆ ಕಾರಣವಾಗಿದೆ. ದಾರಿಹೋಕರ, ಭಾವ ಭಕ್ತಿಗೆ ಪ್ರೇರಣೆಯೂ ಆಗಿದೆ. ಕೆಲವು ವರ್ಷಗಳಲ್ಲಿ ಆ ಜಾಗದಲ್ಲಿ ದೇವಾಲಯವೇ ಎದ್ದು ನಿಲ್ಲುವಂತೆ ಮಾಡಿದೆ. ಹೌದು, ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ಕುಂದುರ್ಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಭರತನಹಳ್ಳಿಯಲ್ಲಿ ದಂಡಿಗೆಮನೆ ಉದ್ಭವ ಗಣಪತಿಯನ್ನು ಕಾಣಬಹುದು.

ಮರದ ಬುಡದಲ್ಲಿ ಗಣಪತಿ ಆಕಾರ ಮೂಡಿರುವುದನ್ನು ಗಮನಿಸಿದ ಸ್ಥಳೀಯ ಕೃಷಿಕ ರಮೇಶ ಭಟ್ಟ ಜಕ್ಕೊಳ್ಳಿ ಅವರಿಗೆ, ದೇವಸ್ಥಾನ ನಿರ್ಮಿಸಲು ಪ್ರೇರಣೆಯಾಗಿದೆ. ಸಾರ್ವಜನಿಕರ ನೆರವಿನೊಂದಿಗೆ ಮರದ ಬುಡದಲ್ಲಿ ಇರುವ ಉದ್ಭವ ಗಣಪತಿಗೆ ದೇವಸ್ಥಾನ ಕಟ್ಟಿಸಿದ್ದಾರೆ. ಪ್ರತಿ ಸಂಕಷ್ಟಿಗೆ ಗಣಹವನ, ಹಬ್ಬ ಹರಿದಿನಗಳಿಗೆ ವಿಶೇಷ ಪೂಜೆ, ದೀಪೋತ್ಸವ ಎಲ್ಲ ನಡೆಸುತ್ತ, ಇದೊಂದು ಧಾರ್ಮಿಕ ಶ್ರದ್ಧಾಕೇಂದ್ರವಾಗಿ ರೂಪುಗೊಂಡಿದೆ.

–ಸುಬ್ರಾಯ ಬಿದ್ರೆಮನೆ, ಯಲ್ಲಾಪುರ

